# ಮಾತಿನ ಸುತ್ತಮುತ್ತ..

'ಮಾತನಾಡುವುದೂ ಒಂದು ಕಲೆ' ಎನ್ನುವುದು ಎಷ್ಟೋ ಸಲ ಸಮಂಜಸ ಹೇಳಿಕೆ ಅನ್ನಿಸಿಕೊಳ್ಳುವುದಿಲ್ಲ. ಎದುರಿಗೆ ಇರುವವರನ್ನು ನೋಯಿಸದಂತೆ, ರಸವತ್ತಾಗಿ ಮಾತನಾಡುವುದು ಈಗಿನ ಕಾಲಮಾನ ಬಯಸುವ ಕಲೆ ಇರಬಹುದು. ಆದರೆ ಹಾಗೆ ಮಾತನ್ನು ಕೇವಲ ರಂಜನೆಗೆ ಬಳಸುವುದೂ ಸಮಾಜಕ್ಕೆ ಅಹಿತಕಾರಿ ಆಗುವ ಸಾಧ್ಯತೆ ಇದೆ. ರಂಜಿಸುತ್ತಲೇ ಬುದ್ಧಿಮಾತು ಹೇಳುವ, ಸಾಮಾಜಿಕ ಅನಿಷ್ಟಗಳನ್ನು ಲೇವಡಿ ಮಾಡುವ ಮಾತುಗಾರಿಕೆಯಾದರೆ, ಅದಕ್ಕೊಂದು ಸಮರ್ಥನೆಯಾದರೂ ಇರುತ್ತದೆ. ಆದರೆ ಬರೀ ರಂಜನೆ, ನಗೆಯುಕ್ಕಿಸುವ, ಲೇವಡಿ ಮಾಡುವ ಮಾತುಗಳಿಂದ ಸಮಾಜಕ್ಕಂತೂ ಪ್ರಯೋಜನವಿಲ್ಲ. ಹಾಗೆಂದೇ ನಗೆಮೇಳದಲ್ಲಿ ಮಾತನಾಡುವಾಗಲೂ ತುಂಬ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ನಮಗೆ ಹಾಸ್ಯ ಅನ್ನಿಸಿದ್ದು, ಸಮಾಜದ ಇನ್ನೊಂದು ವರ್ಗಕ್ಕೆ ಅವಮಾನ ಅನ್ನಿಸಬಹುದು. ಹಾಗೆ ನಮ್ಮ ರಂಜನೆಗಾಗಿ ಇನ್ನೊಬ್ಬರನ್ನು ಅವಮಾನಿಸುವ ಹಕ್ಕು ಯಾರಿಗೂ ಇಲ್ಲ.

ಮಾತನಾಡುವುದಕ್ಕಿಂತ ಮುಂಚೆ, 'ಈ ಮಾತನ್ನು ಹೇಗೆ ಆಡಲಿ? ಇಲ್ಲಿ ಈ ಪದಪ್ರಯೋಗ ಬಳಸಿದರೆ ಸರಿಯಾಗುವುದೆ.. ಈ ಮಾತನ್ನು ಆಡಲೇಬೇಕೆ..' ಎಂದೆಲ್ಲ ಆಲೋಚಿಸುವವರ ಸಂಖ್ಯೆ ಇತ್ತೀಚೆಗೆ ಕಡಿಮೆಯಾಗುತ್ತಿದೆ. ಹಾಗೆ ಮಾತಿನ ಮುನ್ನ ಆಲೋಚಿಸುವಷ್ಟು ವ್ಯವಧಾನವೂ ಈಗ ಬಹಳಷ್ಟು ಜನರಿಗಿಲ್ಲ. ಮಾತಿಗೆ ಮುನ್ನ ಇಂತಹ ಸಣ್ಣದೊಂದು ಎಚ್ಚರ ಇಟ್ಟುಕೊಳ್ಳುವುದು ಮನುಷ್ಯ ಸಹಜ ಗುಣ. ಆದರೆ ಇವತ್ತಿನ ಸಮಾಜದಲ್ಲಿ ಸಹಜತೆಗಿಂತ ಕೃತ್ರಿಮಕ್ಕೇ ಹೆಚ್ಚು ಒಲವು. ಮಾತುಗಳನ್ನು ನಾಟಕೀಯವಾಗಿ ಪ್ರಸ್ತುತ ಪಡಿಸುವುದು ನಾಗರಿಕತೆಯ ಲಕ್ಷಣ ಎಂದುಕೊಳ್ಳುವವರೂ ಇದ್ದಾರೆ.

ಚುನಾವಣೆಯ ಸಂದರ್ಭದಲ್ಲಂತೂ ಮಾತು ಕೇವಲ ರಂಜನೆಯ, ಲೇವಡಿಯ ಆಯುಧ ಆಗುವುದು ಎದ್ದು ಕಾಣುತ್ತದೆ. 'ಯುದ್ಧ ಮತ್ತು ಪ್ರೀತಿಯಲ್ಲಿ ಎಲ್ಲವೂ ಸರಿ' ಎನ್ನುವ ಸಮರ್ಥನೆಯನ್ನೂ ನಾವು ಸಿದ್ಧ ಮಾಡಿಟ್ಟುಕೊಂಡಿದ್ದೇವೆ. ಚುನಾವಣೆ ಅಂದರೆ ಯುದ್ಧ ಎಂದೇ ಎಲ್ಲರೂ ತಿಳಿದುಕೊಂಡಂತಿದೆ. ಈಗ ಚುನಾವಣೆ ನಡೆಯುತ್ತಿರುವ ಶೈಲಿ ನೋಡಿದರೆ ಇದು 'ನಮ್ಮ ವಿರುದ್ಧವೇ ನಾವು ಮಾಡುತ್ತಿರುವ ಯುದ್ಧ' ಎನ್ನುವುದು ಯಾರಿಗೂ ಗೊತ್ತಾಗುತ್ತಿಲ್ಲ.

ಕುರುಕ್ಷೇತ್ರದಲ್ಲಿ ಕೌರವರ ಪರ ದ್ರೋಣಾಚಾರ್ಯರು ಮತ್ತು ಮಗ ಅಶ್ವತ್ಥಾಮ ರಣಕಲಿಗಳಂತೆ ಹೋರಾಡತೊಡಗಿದಾಗ ಪಾಂಡವರು ದಿಕ್ಕೆಟ್ಟರು. ದ್ರೋಣಾಚಾರ್ಯ ರಾಜಗುರು ಆಗಿದ್ದುದರಿಂದ ಹಸ್ತಿನಾವತಿಗೆ ಅವರು ನಿಷ್ಠೆ ತೋರಲೇಬೇಕಿತ್ತು. ಪಾಂಡವರ ಪಾಳೆಯದಲ್ಲಿ ಇದರಿಂದ ಕೋಲಾಹಲ ಉಂಟಾಯಿತು. ಪಾಂಡವರ ಸೈನ್ಯ ಧ್ವಂಸವಾಗುತ್ತಿರುವುದನ್ನು ನೋಡಲಾಗದೆ ಶ್ರೀಕೃಷ್ಣನೇನೋ ಒಂದು 'ಮಾತಿನ ಸಂಚು' ಹೂಡಿದ. ಯುದ್ಧದಲ್ಲಿ ಮೇಲುಗೈ ಸಾಧಿಸಲು ಆ ಸಂಚು ಶ್ರೀಕೃಷ್ಣನಿಗೆ ಅಗತ್ಯವಾಗಿತ್ತು. ಯುದ್ಧದಲ್ಲಿ ದ್ರೋಣಪುತ್ರ ಅಶ್ವತ್ಥಾಮ ಹತನಾದ ಎಂಬ ಗಾಳಿಸುದ್ದಿ ಹರಡಿತು. ಈ ವದಂತಿಯನ್ನು ಖಚಿತಪಡಿಸಲೆಂದು ದ್ರೋಣಾಚಾರ್ಯ ಮೊರೆಹೋದದ್ದು ಯುಧಿಷ್ಠಿರನಿಗೆ. ಏಕೆಂದರೆ ಯುಧಿಷ್ಠಿರ ಸತ್ಯಪಕ್ಷಪಾತಿ ಎನ್ನುವುದು ದ್ರೋಣಾಚಾರ್ಯರ ನಂಬಿಕೆಯಾಗಿತ್ತು. ಯುಧಿಷ್ಠಿರ ಹೇಳಿದ್ದೇನು? ಸುಳ್ಳನ್ನೇನೂ ಹೇಳಲಿಲ್ಲ. 'ಅಶ್ವತ್ಥಾಮಾ ಹತೋ ನರೋ ವ ಕುಂಜರೋ ವ' ಎಂದ. 'ಅಶ್ವತ್ಥಾಮ ಸತ್ತಿರುವುದು ಹೌದು. ಆದರೆ ಅದು ಮನುಷ್ಯನೋ ಆನೆಯೋ ಎಂಬುದು ನನಗೆ ತಿಳಿಯದು' ಎಂದು ಅದರರ್ಥ. ಮಾತಿನ ಮಹಿಮೆ ನೋಡಿ. ಆ ಗಳಿಗೆಯಲ್ಲಿ ದ್ರೋಣಾಚಾರ್ಯರಿಗೆ ತನ್ನ ಮಗ ಅಶ್ವತ್ಥಾಮ ಚಿರಂಜೀವಿ, ಅವನಿಗೆ ಸಾವಿಲ್ಲ ಎನ್ನುವ ಸತ್ಯ ಅದು ಹೇಗೆ ಮರೆತು ಹೋಯಿತೋ? ಅದಕ್ಕೆ ಯುದ್ಧದ ರೌದ್ರತೆ ಕಾರಣವಿರಲೂಬಹುದು. ಪುತ್ರಮರಣದ ಸುದ್ದಿಯಿಂದ ಅವರು ವಿಹ್ವಲರಾದರು. ಇಲ್ಲಿ ಅಶ್ವತ್ಥಾಮ ಚಿರಂಜೀವಿ ಹೌದೇ ಅಲ್ಲವೇ ಎನ್ನುವುದರ ಬಗ್ಗೆ ಜಿಜ್ಞಾಸೆ ಏಳಬಹುದು. ಆದರೆ ಗಾಳಿಸುದ್ದಿ ಎನ್ನುವುದಂತೂ ಚಿರಂಜೀವಿ ಎನ್ನದೆ ನಿರ್ವಾಹವಿಲ್ಲ. ನಮ್ಮ ಈಗಿನ ಚುನಾವಣೆಯಲ್ಲೂ ಸತ್ಯ ಸುದ್ದಿಗಳಿಗಿಂತ ಎರಡು ಪಟ್ಟು ಸುಳ್ಳು ಸುದ್ದಿಗಳು ವಿಜೃಂಭಿಸಿವೆ. ಜತೆಗೆ ನಂಬಲೂ ಆಗದ, ನಂಬದೆ ಇರಲೂ ಆಗದಂತಹ ಅರ್ಧಸತ್ಯಗಳು! ಸುಳ್ಳುಗಳನ್ನಾದರೂ ಪತ್ತೆ ಹಚ್ಚಬಹುದು, ಆದರೆ ಅರ್ಧಸತ್ಯಗಳನ್ನಲ್ಲ. ಅದು ಸಮಾಜದ ಸ್ವಾಸ್ಥ್ಯಕ್ಕೆ ಇನ್ನೂ ಅಪಾಯಕಾರಿ.

ಕವಿ ಚೆನ್ನವೀರ ಕಣವಿಯವರ ಮಾತಿನ ಕುರಿತ ಕವಿತೆಯೊಂದಿದೆ. ನಮ್ಮ ಮಾತು ಹೇಗಿರಬೇಕು ಎನ್ನುವುದನ್ನು ಆ ಕವಿತೆಯಲ್ಲಿ ಅವರು ಸೂಚಿಸಿದ್ದಾರೆ. 'ಮೆಲ್ಲೆದೆಯ ಸವಿಯೊಲುಮೆ ಕರಗಿ ಕಂಬನಿಯಾಗಿ/ ಹೆಣ್ಣ ಕಣ್ಣಂಚಿನಲಿ ತುಳುಕುವಂತೆ/ ಸುಳಿಗಾಳಿಯೊಂದಿನಿತು ಸೂಸಿ ಬಂದರೂ ಸಾಕು/ ಮರವನಪ್ಪಿದ ಬಳ್ಳಿ ಬಳುಕುವಂತೆ.. ' ಎನ್ನುವುದು ಅವರ ಉಪಮೆ. 'ನಾವು ಆಡುವ ಮಾತು ಹೀಗಿರಲಿ ಗೆಳೆಯ/ ಮೃದುಮಾತು ಮೂಲೋಕ ಗೆಲ್ಲುವುದು ತಿಳಿಯ/ ಮೌನ ಮೊಗ್ಗೆಯನೊಡೆದು ಮಾತರಳಿ ಬರಲಿ/ ಮೂರು ಗಳಿಗೆಯ ಬಾಳು ಮಗಮಗಿಸುತಿರಲಿ..' ಎನ್ನುತ್ತಾರೆ ಕವಿ.

ಮಾತು ಕೇವಲ ರಂಜನೆಯಾದಾಗ ಹೀಗೆ ಸುಳಿಗಾಳಿ ಸೂಸಿಬರುವುದು ಕಷ್ಟ. ಆ ಸುಳಿಗಾಳಿಗೆ ಮರವನಪ್ಪಿದ ಬಳ್ಳಿ ಬಳುಕುವುದೂ ಇಲ್ಲ. ಆಗೇನಿದ್ದರೂ ಅದು ಸುಂಟರಗಾಳಿ. ಆ ಗಾಳಿಗೆ ಬಳ್ಳಿ ಬಳುಕುವುದು ಬಿಡಿ, ಮರವೇ ಧರೆಗುರುಳುತ್ತದೆ.

■ ಆಲೇಖ

## ಮಾತೇ ಮುತ್ತು

★ ಸಾವು ದೊಡ್ಡ ಸಂಗತಿಯೇ ಅಲ್ಲ. ಆದರೆ ಸೋಲೊಪ್ಪಿಕೊಂಡು ಕೀರ್ತಿಹೀನನಾಗಿ ಬದುಕುವುದು ದಿನವೂ ಸತ್ತಂತೆ.

—ನೆಪೋಲಿಯನ್

★ ವಸ್ತುಸ್ಥಿತಿ ಹಾಗೆಯೇ ಇರುತ್ತದೆ. ನೀವು ಮೆಚ್ಚುವುದಿಲ್ಲ ಎನ್ನುವ ಕಾರಣಕ್ಕಾಗಿ ಅದು ಬದಲಾಗುವುದಿಲ್ಲ.

—ಜವಾಹರಲಾಲ್ ನೆಹರು

★ ಇತರರು ಒಂದಿಡೀ ಪುಸ್ತಕದಲ್ಲಿ ಹೇಳುವುದನ್ನು ಹತ್ತೇ ವಾಕ್ಯಗಳಲ್ಲಿ ಹೇಳಬೇಕು ಎನ್ನುವುದು ನನ್ನ ಹೆಬ್ಬಯಕೆ.

—ಫ್ರೆಡ್ರಿಕ್ ನೀಷೆ

★ ನಟಿ ಆಗುವುದಕ್ಕಿಂತ ನಟಿ ಆಗಬೇಕು ಎನ್ನುವ ಕನಸೇ ಹೆಚ್ಚು ರೋಚಕ.

—ಮರ್ಲಿನ್ ಮನ್ರೊ

★ ಸ್ವರ್ಗದಲ್ಲಿ ಸೇವಕನಾಗಿರುವುದಕ್ಕಿಂತ ನರಕದಲ್ಲಿ ಆಳುವವನಾಗಿ ಇರುವುದು ಒಳ್ಳೆಯದು.

—ಜಾನ್ ಮಿಲ್ಟನ್

★ ಮಹಿಳೆಯರನ್ನು ಯುದ್ಧದಲ್ಲಿ ತೊಡಗಿಸುವುದನ್ನು ನಾನು ಬಯಸುವುದಿಲ್ಲ. ಏಕೆಂದರೆ ಅವರು ಭಯಂಕರವಾಗಿ ಕಾದಾಡುತ್ತಾರೆ.

—ಮಾರ್ಗರೆಟ್ ಮೀಡ್

★ ನಮ್ಮ ಆಲೋಚನೆಗಳೇ ನಮ್ಮನ್ನು ರೂಪಿಸುತ್ತವೆ. ಹಾಗಾಗಿ ಆಲೋಚನೆಗಳ ಬಗ್ಗೆ ಗಮನ ಹರಿಸಿ.

—ಸ್ವಾಮಿ ವಿವೇಕಾನಂದ

★ ಕಲೆ ಏನನ್ನೂ ಕಲಿಸುವುದಿಲ್ಲ; ಬದುಕಿನ ಮಹತ್ವವನ್ನು ಬಿಟ್ಟು.

—ಹೆನ್ರಿ ಮಿಲ್ಲರ್

★ ಭಯ ಉಂಟು ಮಾಡುವವನಲ್ಲ, ಭಯವನ್ನು ಗೆದ್ದವನೇ ಧೈರ್ಯವಂತ.

—ನೆಲ್ಸನ್ ಮಂಡೇಲ

★ ನೀವು ಸಂತೋಷವಾಗಿದ್ದೀರಾ ಎಂದು ನಿಮ್ಮನ್ನೇ ನೀವು ಪ್ರಶ್ನಿಸಿಕೊಳ್ಳಿ. ಏಕೆಂದರೆ ಬಹಳ ಸಲ ನೀವು ಹಾಗೆ ಅಂದುಕೊಂಡಿರುತ್ತೀರಿ.

—ಜಾನ್ ಸ್ಟುವರ್ಟ್ ಮಿಲ್

★ ಮಗು ನಿಮ್ಮ ಹೊಟ್ಟೆ ಇದ್ದಂತೆ. ಅದು ಬಯಸ್ಸಿದ್ದೆಲ್ಲವನ್ನೂ ಕೊಡಬೇಡಿ.

-ಫ್ರಾಂಕ್ ಕ್ಲಾರ್ಕ್